**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ಅನಿಲ ರಾಠೋಡ** | **ಚಾ.ಸಾ. 18** |
| **ತಂದೆಯ ಹೆಸರು** | **:** | **ಮಾನು ರಾಠೋಡ** | **ಪ್ರಾ.ಸಾ. 10** |
| **ವಯಸ್ಸು** | **:** | **44 ವರ್ಷ** | **ದಿನಾಂಕಃ 29-03-2025** |
| **ಉದ್ಯೋಗ** | **:** | **Assistant Director** | |
| **ವಾಸಸ್ಥಳ** | **:** | **ಕಲಬುರ್ಗಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕಃ 29-06-2016 ರಿಂದ 26-09-2017 ರವರೆಗೇ ಚಿಂಚೋಳಿಯಲ್ಲಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 21-03-2017 ರಂದು ಆರೋಪಿ ವಿರುದ್ದ ದೋಷಾರೋಪಣ ಪತ್ರವನ್ನು ತಯಾರಿಸಲು ಅನುಮತಿಗಾಗಿ ಪತ್ರವನ್ನು ನೀಡಿರುತ್ತಾರೆ. ಸದರಿ ಪತ್ರವನ್ನು ಪರಿಶೀಲಿಸಿ, ನಮ್ಮ ಕಚೇರಿಯ ಕಡತಗಳನ್ನು ಪರಿಶೀಲಿಸಿದಾಗ ಆರೋಪಿ ತಪ್ಪು ಮಾಡಿರುವುದು ಕಂಡುಬಂದ ಕಾರಣ ದೋಷಾರೋಪಣೆ ಪತ್ರವನ್ನು ತಯಾರಿಸಲು ಅನುಮತಿಯನ್ನು ನೀಡಿದ್ದೇನೆ.

ಸದರಿ ಘಟನೆ ನನ್ನ ಕರ್ತವ್ಯದ ಅವದಿಯಲ್ಲಿ ಆಗಿರುವುದಿಲ್ಲ ಮತ್ತು ಆರೋಪಿಯನ್ನು ನಾನು ನೋಡಿರುವುದಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ 21 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 21(ಎ) ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ಪೊಲಿಸರು ನನಗೆ ಘಟನೆ ಬಗ್ಗೆ ಮಾಹಿತಿ ಕೇಳಿದ್ದು ಅದರ ವಿವರಣೆಗಾಗಿ ನಿಪಿ 21 ರ ಪತ್ರವನ್ನು ಪೊಲಿಸರಿಗೆ ನೀಡಿದೇನೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ 22 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 22(ಎ) ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ದೋಷಾರೋಪಣೆ ಪತ್ರವನು ತಯಾರಿಸಲು ಅನುಮತಿ ನೀಡಿರುವ ಬಗ್ಗೆ ನಿಪಿ 22 ರ ಪತ್ರವನ್ನು ನೀಡಿದ್ದೀನೆ. ಆರೋಪಿಗೆ ತರಬೇತಿ ಕುರಿತು ಎರಡು ಚೆಕ್ಕುಗಳನ್ನು ಮೊದಲಿನ ಕಾರ್ಯನಿರ್ವಾಹಕ ಅಧಿಕಾರಿಗಳು ನೀಡಿದ್ದು ಸದರಿ ಚೆಕ್ಕುಗಳ ಮೇಲೆ ಆರೋಪಿ 40 ಸಾವಿರ ಹೆಚ್ಚಿಗೆ ತಿದ್ದಿ 80 ಸಾವಿರ ರೂಪಾಯಿಗಳನ್ನು ಸರಕಾರಕ್ಕೆ ವಂಚನೆ ಮಾಡಿರುವುದು ಆಂತರಿಕ ತನಿಖಾ ವರಧಿಯಲಿ ಕಂಡುಬಂದಿರುತ್ತದೆ. ಆದ್ದರಿಂದ ಕಡತಗಳನ್ನು ಪರಿಶೀಲಿಸಿ, ದೋಷಾರೋಪಣೆ ಪತ್ರವನ್ನು ಸಲ್ಲಿಸಲು ಅನುಮತಿ ನೀಡಿದ್ದೇನೆ. ಸದರಿ ಆಂತರಿಕ ತನಿಖಾ

ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 23 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆ ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ಸದರಿ ದಾಖಲೆಯನ್ನು ನಿಪಿ 24 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 24(ಎ) ಎಂದು ಗುರುತಿಸಲಾಯಿತು. ಪೋಲಿಸರು ನನಗೆ ದಿನಾಂಕಃ 21-03-2017 ರಂದು ತರಬೇತಿ ನೀಡಿರುವ ಮಾಹಿತಿಯನ್ನು ಕೇಳಿದ್ದು ಅದರಂತೆ ನಾನು ನಿಪಿ 24 ರಂತೆ ವಿವರಣೆಯನ್ನು ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ JPA ವಕೀಲರಿಂದಃ**

ಈ ಪ್ರಕರಣದ ಕುರಿತು ಪೋಲಿಸರು ನಮಗೆ 2 ಬಾರಿ ನೀಡಿದ್ದು ಮತ್ತು ಅದಕ್ಕೆ ನಾನು ಉತ್ತರವನ್ನು ನೀಡಿದ್ದೇನೆ. ಸದರಿ ಎರಡು ಪತ್ರಗಳು ಒಂದೇ ದಿನದಂದು ನನಗೆ ಬಂದಿರುತ್ತವೆ. ಸದರಿ ಪತ್ರಗಳಲ್ಲಿ ಬೇರೆ ಬೇರೆ ದಿನಾಂಕಗಳು ನಮೂಸದಿಲಾಗಿದೆ.

ತರಬೇತಿ ಕುರಿತು ದಾಖಲೆಗಳನ್ನು ನೋಡಿದ್ದೀರ ಎಂದು ಪ್ರಶ್ನಿಸಿದಾಗ ಸಾಕ್ಷಿ ಲಭ್ಯವಿರುವ ದಾಖಲೆಗಳನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ 21 ರ ಕಾಲಂ 4 ರಲ್ಲಿ ಎಷ್ಟು ಜನ ತರಬೇತಿ ಪಡೆದಿದ್ದಾರೆ ಎಂದು ನಮೂದು ಇಲ್ಲ ಎಂದರೆ ಸರಿ. ತರಬೇತಿ ಶಾಖೆ ಉಸ್ತುವಾರಿ ಮುತ್ತ ವ್ಯವಸ್ಥಾಪಕರು ನಿಮ್ಮ ಕಚೇರಿ ಕಡತವನ್ನು ಹಸ್ತಾಂತರಿಸಿರುವುದಿಲ್ಲ ಆದ್ದರಿಂದ ತರಬೇತಿ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಮ್ಮ ಹತ್ತಿರ ಕಡತವಿಲ್ಲದೇ ಇದ್ದರೇ ನಿಪಿ 24 ರಲ್ಲಿ ಸುಮಾರು 50 ಜನ ಶಿಬಿರಾತಿಗೆ ಹಾಜರಿದ್ದರು ಎಂದು ಹೇಗೆ ಬರೆದಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ತರಬೇತಿ ಕೈಪಿಡಿಯಲ್ಲಿ 50 ಜನರು ತರಬೇತಿ ಕೊಡಬೇಕು ಎಂದು ಇತ್ತು ಮತು ಮೊದಲಿನ ಅಧಿಕಾರಿಗಳ ಜೊತೆ ಚರ್ಚಿಸಿ ಸುಮಾರು 40 ರಿಂದ 50 ಜನರು ಹಾಜರಿದ್ದರು ಎಂದು ಗೊತ್ತಾದ ಕಾರಣ ಆ ರೀತಿ ನಮೂದಿಸಿದ್ದೇನೇ ಎಂದು ನುಡಿಯುತ್ತಾರೆ. ನಿಪಿ 24 ರಲ್ಲಿ ನಮ್ಮ ಅಧಿಕಾರಿಗಳೊಂದಿಗೆ ಚರ್ಚಿಸಿರುವ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಒಬ್ಬರಿಂದ ತರಬೇತಿ ನಡೆಸಲು ಆಗುವುದಿಲ್ಲ ಮತ್ತು ತರಬೇತಿ ನಡೆಸಲು ಸಂಪನ್ಮೂಲ ವ್ಯಕ್ತಿಗಳು ಬೇಕಾಗುತ್ತಾರೆ ಎಂದರೆ ಸರಿ. ಸಂಪನ್ಮೂಲ ವ್ಯಕ್ತಿಗಳ ಖರ್ಚು ತರಬೇತಿ ಕೊಡುವವರ ನೋಡಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ಸಾಮಾನವಾಗಿ ಯಾವುದೇ ಒಂದು ಕೆಲಸದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಇಲ್ಲದೇ ಆಗುವುದಿಲ್ಲ ಎಂದರೆ ಸರಿ. ಸಂಪನ್ಮೂಲ ವ್ಯಕ್ತಿಗಳಿಗೆ ಇರಲು ವ್ಯವಸ್ಥೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಸಂಪನ್ಮೂಲ ವ್ಯಕ್ತಿಗಳಿಗೆ ಇಷು ಹಣ ನೀಡಬೇಕು ಎಂದು ನಿಯಮ ಇರುತ್ತದೆ ಅದರಂತೆ ನೀಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ಹಣ ತರಬೇತಿ ಆದ ನಂತರ ನೀಡಬೇಕಾದ ಕಾರಣ ತರಬೇತಿ ನಡೆಸುವವರು ಖರ್ಚು ನೋಡಿಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಚೆಕ್ಕುಗಳನ್ನು ಮೊದಲೇ ನೀಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ಹೇಗೆ ನೀಡಿದ್ದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆಗಿನ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಿಗೆ ವ್ಯವಸ್ಥೆ ಮಾಡಲು ಆರೋಪಿಗೆ ಹೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೇ ಅಧಿಕಾರಿ ತಮ್ಮ ಜೇಬಿನಿಂದ ಖರ್ಚು ಮಾಡವುದಿಲ್ಲ ಎಂದರೆ ಸರಿ. ಆಗಿನ ಕಾರ್ಯನಿರ್ವಾಹಕ ಅಧಿಕಾರಿಗಳು ಆರೋಪಿಗೆ ಆಗಿರುವ ಖರ್ಚುಗಳನು ನೋಡಿಕೊಳ್ಳಲು ಚೆಕ್ಕುಗಳ ಮೇಲೆ 4 ಎಂದು ಸಂಖ್ಯೆ ಸೇರಿಸಲು ಹೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದೋಷಾರೋಣೆ ಪತ್ರ ಸಲ್ಲಿಸಲು ನೀವು ನಿಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಪೋಲಿಸರಿಗೆ ಅನುಮತಿ ನೀಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ವೊದಲಿನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಆರೋಪಿ ವಿರುದ್ಧ ಕ್ರಿಮಿನಲ ಪ್ರಕರಣವನ್ನು ದಾಖಲಿಸಲು ಅನುಮತಿ ನೀಡಿದು ಮತ್ತು ಆರೋಪಿಯನ್ನು ಅಮಾನತು ಮಾಡಿದ್ದರು ಆದ್ದರಿಂದ ನಾನು ಅನುವತಿಯನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಈ ರೀತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಆರೋಪಿ ವಿರುದ್ಧ ಕ್ರಿಮಿನಲ ಪ್ರಕರಣವನ್ನು ದಾಖಲಿಸಲು ಅನುಮತಿ ನೀಡಿರುವ ದಾಖಲೆಯನ್ನು ನಾನು ನೋಡಿದ್ದೇನೆ. ದೋಷಾರೋಪಣೆ ಪತ್ರವನ್ನು ಸಲ್ಲಿಸಲು ನೀವು ನಿಮ್ಮ ಮೇಲಾಧಿಕಾರಿಗಳಿಂದ ಯಾವುದೇ ಅನುಮತಿ ಪಡೆದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ ಎಂದು ನುಡಿಯುತ್ತಾರೆ.

ನಾನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಕೇಳಿದರೆ ವೊದಲಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಪ್ಪು ಮಾಡಿರುವುದು ಕಂಡುಬರುತ್ತದೆ ಆದ್ದರಿಂದ ನಾನು ಮತ್ತು ವೊದಲಿನ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿ ಈ ರೀತಿ ನಿಪಿ 22 ರ ಅನಮತಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಘಟನೆಯಲ್ಲಿ ಆರೋಪಿ ಪಾತ್ರ ಇಲ್ಲದೇ ಇದ್ದರೂ ಸಹ ನಾನು ಹಾಗೂ ವೊದಲಿನ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿ ನಿಪಿ 21 ರಿಂದ 24 ರ ದಾಖಲೆಗಳನ್ನು ತಯಾರಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೊದಲಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೇ ಉಳಿಸಲು ದೋಷಾರೋಪಣೆ ಪತ್ರವನ್ನು ತಯಾರಿಸಲು ಅನುಮತಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**